ಒಎಸ್ ಸಂ.ಃ 84/2012
ಡಿಡಬ್ಲ್ಯೂ ಃ 5
ದಿನಾಂಕ 25-11-2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ- 2ನೇ ಪ್ರತಿವಾದಿ ಪರ ಶ್ರೀ ಕೆ.ಎಂ ವಕೀಲರಿಂದ

ನಮ್ಮ ಒಟ್ಟು ಕುಟುಂಬದ ಮೂಲ ಪುರುಷ ನಾನೇ. ನಮ್ಮ ತಾಯಿಯ ತವರು ಮನೆ ಉತ್ತನೂರು. ನಮ್ಮ ತಾಯಿಯ ತಂದೆಯ ಹೆಸರು ಮುನಿಶಾಮಪ್ಪ, ನಮ್ಮ ತಾಯಿಯ ತಂದೆಯ ತಂದೆಯ ಹೆಸರು ಬೈರಪ್ಪ, ಬೈರಪ್ಪನ ಹೆಸರು ಕುಡುವನಹಳ್ಳಿ ಬೈರಪ್ಪ ಎಂದರೆ ಸರಿ. ಅವರನ್ನು ಉತ್ತನೂರು ಬೈರಪ್ಪ ಎಂದು ಸಹ ಕರೆಯುತ್ತಿದ್ದರು ಎಂದರೆ ಸರಿ. ಅವರು ಕುಡುವನಹಳ್ಳಿಯಿಂದ ಬಂದು ಉತ್ತನೂರಿನಲ್ಲಿ ನೆಲೆಸಿದ್ದರಿಂದ ಅವರನ್ನು ಕುಡುವನಹಳ್ಳಿ ಬೈರಪ್ಪ ಎಂದು ಕರೆಯುತ್ತಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ಕುಡುವನಹಳ್ಳಿ ಬೈರಪ್ಪನಿಗೆ ಇಬ್ಬರು ಮಕ್ಕಳು ಅವರು ಮುನಿಶಾಮಪ್ಪ ಮತ್ತು ಮುನಿಯಪ್ಪ, 2ನೇ ಮಗ ಮುನಿಯಪ್ಪನಿಗೆ ಮಕ್ಕಳಿರಲಿಲ್ಲ ಎಂದರೆ ಸರಿ. ದೊಡ್ಡ ಮುನಿಶಾಮಪ್ಪನಿಗೆ ಇಬ್ಬರು ಹೆಣ್ಣು ಮಕ್ಕಳು. ಮುನಿಶಾಮಪ್ಪನ ಹೆಂಡತಿ ಹೆಸರು ಅಕ್ಕಮ್ಮ. ಆ ಕುಟುಂಬದಲ್ಲಿ ಅಕ್ಕಯ್ಯಮ್ಮ ಎನ್ನುವ ಹೆಸರು ಯಾರಿಗೂ ಇರಲಿಲ್ಲ ಎಂದರೆ ಸರಿ.

ಮುನಿಶಾಮಪ್ಪನ ಹೆಂಡತಿ ಅಕ್ಕಮ್ಮನ ತವರು ಮನೆ ಹೆಚ್.ಕ್ರಾಸ್ ಹತ್ತಿರ ಯಶವಂತಪುರ. ಅಕ್ಕಮ್ಮನವರ ಅಣ್ಣ ನಲ್ಲಪ್ಪ ಎಂದು ಇದ್ದರು ಎಂದರೆ ಸರಿ. ಅವರಿಗೆ ದೊಡ್ಡಬೈರಪ್ಪ ಮತ್ತು ಚಿಕ್ಕಬೈರಪ್ಪ ಎನ್ನುವ ಗಂಡು ಮಕ್ಕಳು ಇದ್ದರು ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ಅಲ್ಲಿ ಚಿಕ್ಕಬೈರಪ್ಪ ಎನ್ನುವವರು ಇದ್ದು ಅವರು ನಲ್ಲಪ್ಪನ ತಮ್ಮನ ಮಗ ಎಂದು ಹೇಳುತ್ತಾರೆ. ನಲ್ಲಪ್ಪನ ಮಕ್ಕಳು ಇಬ್ಬರು ಅವರು ನಾರಾಯಣಪ್ಪ ಮತ್ತು ಬೈರಪ್ಪ, ನಲ್ಲಪ್ಪನ ಮಗ ಬೈರಪ್ಪ ಅವರ ತಮ್ಮನ ಮಗ ಬೈರಪ್ಪನಿಗಿಂತ ದೊಡ್ಡವರು ಆದ್ದರಿಂದ ಅವರನ್ನು ದೊಡ್ಡಬೈರಪ್ಪ ಎಂದು ಕರೆಯುತ್ತಿದ್ದರು ಎಂದರೆ ಸರಿ. ನಲ್ಲಪ್ಪನ ಮಗ ದೊಡ್ಡಬೈರಪ್ಪನನ್ನು ಉತ್ತನೂರಿಗೆ ಕರೆದುಕೊಂಡು ಬಂದು ಮುನಿಶಾಮಿಯ ದೊಡ್ಡಮಗಳನ್ನು ಕೊಟ್ಟು ಮದುವೆ ಮಾಡಿರುತ್ತಾರೆ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ಅಲ್ಲೇ ಇರುತ್ತಾರೆ ಎಂದು ಹೇಳುತ್ತಾರೆ. ನನಗೆ ಈ ವಿಚಾರ ಗೊತ್ತಿದ್ದರೂ ಕೂಡ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮುನಿಸ್ವಾಮಿಯವರ 2ನೇ ಮಗಳನ್ನು ಅಮ್ಮೇರಹಳ್ಳಿ ಬೈರಪ್ಪನಿಗೆ ಮದುವೆ ಮಾಡಿ ಅವರನ್ನು ಕರೆದುಕೊಂಡು ಬಂದು ಮನೆಯಲ್ಲಿ ಇಟ್ಟುಕೊಂಡಿದ್ದಾರೆ ಎಂದರೆ ಸರಿ. ಆ ಬೈರಪ್ಪ

ನಮ್ಮ ತಂದೆಯಾಗಬೇಕು. ನಮ್ಮ ತಂದೆ ಬೈರಪ್ಪನವರ ತಂದೆ ಹೆಸರು ಚೌಡಪ್ಪ. ಬೈರಪ್ಪನವರ ಚಿಕ್ಕಪ್ಪನ ಮಗ ಇನ್ನೊಬ್ಬ ಬೈರಪ್ಪ ಇದ್ದಾರೆ ಎಂದರೆ ಸರಿ. ಅವರು ನಮ್ಮ ತಂದೆ ಬೈರಪ್ಪನಿಗಿಂತ ಚಿಕ್ಕವರು ಎಂದರೆ ಸರಿ. ಆಗಾಗಿ ಅವರನ್ನು ಚಿಕ್ಕಬೈರಪ್ಪ ಎಂದು ನಮ್ಮ ತಂದೆಯನ್ನು ದೊಡ್ಡಬೈರಪ್ಪ ಎಂದು ಕರೆಯುತ್ತಿದ್ದರು ಎಂದರೆ ಸರಿ. ಉತ್ತನೂರಿನಲ್ಲಿ ಮುನಿಶಾಮಪ್ಪನ ಅಳಿಯಂದಿರಾದ ಇಬ್ಬರೂ ಬೈರಪ್ಪನವರನ್ನು ಕರೆಯಬೇಕಾದಲ್ಲಿ ಯಶವಂತಪುರದ ದೊಡ್ಡಬೈರಪ್ಪ ಮತ್ತು ಅಮ್ಮೇರಹಳ್ಳಿಯ ದೊಡ್ಡಬೈರಪ್ಪ ಎಂದು ಕರೆಯುತ್ತಿದ್ದರು ಎಂದರೆ ಸರಿ.

ಯಶವಂತಪುರದ ದೊಡ್ಡ ಬೈರಪ್ಪನವರು ವ್ಯವಸಾಯ ಮಾಡುತ್ತಿದ್ದು ನಮ್ಮ ತಂದೆ ಅಮ್ಮೇರಹಳ್ಳಿ ದೊಡ್ಡಬೈರಪ್ಪನವರು ಮನೆ ವ್ಯವಹಾರ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಈ ವಿಚಾರ ಸರಿಯಾಗಿದ್ದರೂ ಕೂಡ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕುಡುವನಹಳ್ಳಿ ಬೈರಪ್ಪನವರು ಯಾವಾಗ ತೀರಿಕೊಂಡರು ಎಂದು ನನಗೆ ಗೊತ್ತಿರುವುದಿಲ್ಲ.

ಮುಂದುವರೆದ ಪಾಟೀ ಸವಾಲನ್ನು ವಿನಂತಿಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿ. ಇದೆ

(ಸುಜಾತ ಸುವರ್ಣ.ಬಿ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮುಳಬಾಗಿಲು.